# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ/ವಾರ್ಡ್ ಸಮಿತಿ ಸಹಾಯಕಅಭಿಯಂತರರಕಛೇರಿ ವಾರ್ಡ್ ಸಂಖ್ಯೆ: 136 ಜೆ.ಜೆ.ಆರ್ ನಗರ ಬೆಂಗಳೂರು

**********************************************************

ಸಂಖ್ಯೆ: w-136/Committee/Proceding -32/2021-22 dt. 21-02-2022

## ಸಭೆಯ ನಡವಳಿಗಳು

ಶ್ರೀ ಸತೀಶ್ ಕುಮಾರ್ ಸಮಿತಿಯ ಕಾರ್ಯದರ್ಶಿಗಳು ಸಭೆಯನ್ನು ನಡೆಸುತ್ತಾ ಸಭೆಯಲ್ಲಿ ಉಪಸ್ಥಿತಗೊಂಡಿರುವ ಮಾನ್ಯ ನೋಡಲ್ ಅಧಿಕಾರಿಗಳಿಗೆ ಮತ್ತು ಉನ್ನತ ಸಭೆಯಲ್ಲಿ ಅಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಭೆಗೆ ಸ್ವಾಗತಕೋರಿದರು. ನಂತರ ಮಾನ್ಯ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು

### ಸಭೆಯಲ್ಲಿಚರ್ಚಿಸಲಾದ ವಿಷಯಗಳು

ಮೊದಲಿಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಗಮನಹರಿಸುತ್ತಾ ಹಾಗೂ ಸಾರ್ವಜನಿಕರಿಂದ ಬಂದ ದೂರುಗಳನ್ನು ಪರಿಹರಿಸಿದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಮಾನ್ಯ ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಮಳೆ ನೀರು ಚರಂಡಿಗಳನ್ನು ಪರಿವೀಕ್ಷನೆ ಮಾಡಿ ಕೈಗೊಂಡಿರುವ ಕ್ರಮದ ಬಗ್ಗೆ ಸಭೆಯಲ್ಲಿ ವಿವರಣೆಯನ್ನು ಕೋರಿದರು.

ಈ ಬಗ್ಗೆ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಸ್,ಡಬ್ಲ್ಯೂ.ಡಿ ಮೋರಿಗಳನ್ನು ಪರಿವೀಕ್ಷಣೆ ಮಾಡಿ ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲ ಎಸ್ ಎಸ್.ಡಬ್ಲ್ಯೂ.ಡಿ ಮೋರಿಗಳು ಗೋಡೆಗಳು ಮತ್ತು ಫೇನ್ಸಿಗ್ ಸುರಕ್ಷಿತವಾಗಿವೆ ಹಾಗೂ ಕೆಲವು ಕಿಡಿಗೇಡಿಗಳು ಎಸ್.ಡಬ್ಲ್ಯೂ.ಡಿ ಮೋರಿಗೆ ಕಸ ಸುರಿಯುತ್ತಿರುವುದು ಕಂಡು ಬಂದಿದ್ದು ಸದರಿ ವಿಷಯದ ಬಗ್ಗೆ ಕಾರ್ಯಪಾಲಕ ಅಭಿಯಂತರರು (ಮಳೆ ನೀರು ಚರಂಡಿ) ಪತ್ರವನ್ನು ಬರೆಯಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ಅನಾಧಿಕೃತ ಹಾಗೂ ನಕ್ಷೆ ಇಲ್ಲದೇ ನಿರ್ಮಾಣ ಮಾಡಿರುವ ಕಟ್ಟಡಗಳಿಗೆ ನೋಟಿಸ್ ನೀಡುತ್ತಿರುವ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

--2

Scanned with CamScanner

ಈ ಬಗ್ಗೆ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ನಕ್ಷೆ ಮಂಜೂರಾತಿ ಇಲ್ಲದೆ ಕಟ್ಟಡ ನಿರ್ಮಾಣ ಮಾಡಿರುವ ಕಟ್ಟಡಗಳಿಗೆ ಬಿ.ಬಿ.ಎಂ.ಪಿ ಕಾಯ್ದೆ 2020 ರ ಕಾಲಂ 313 ಪ್ರಕಾರ ನೋಟೀಸ್ ಜಾರಿ ಮಾಡಿ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್ –136ರ ವ್ಯಾಪ್ತಿಯಲ್ಲಿ ಬರುವ ವಿನಾಯಕ ನಗರ ಬಸ್ ನಿಲ್ದಾಣದಲ್ಲಿ ಅನಧಿಕೃತ ವಾಹನ ನಿಲುಗಡೆ ಮಾಡಿ ಬಸ್ ನಿಲ್ದಾಣಕ್ಕೆ ಬಿ. ಎಂ. ಟಿ. ಸಿ ಬಸ್‌ಗಳು ನಿಲ್ದಾಣಕ್ಕೆ ಬರದೆ ಸಾರ್ವಜನಿಕರಿಗೆ ತೊಂದರೆ ಯಾಗುತ್ತಿರುವ ಬಗ್ಗೆ ಸಭೆಯಲ್ಲಿ ವಿವರವನ್ನು ಕೋರಿದರು.

ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ಸದರಿ ವಿಷಯದ ಬಗ್ಗೆ ಮಾನ್ಯ ಶಾಸಕರು ಹಾಗೂ ಸ್ಥಳಿಯ ಮುಖಂಡರು ಸಂಚಾರಿ ಪೊಲೀಸರೊಂದಿಗೆ ಸದರಿ ಸ್ಥಳದಲ್ಲಿ ನಿಂತಿದ್ದ ಅನಧಿಕೃತ ವಾಹನಗಳನ್ನು ತೆರವುಗೊಳಿಸಿ ಮುಂದಿನ ದಿನಗಳಲ್ಲಿ ಸದರಿ ಸ್ಥಳದಲ್ಲಿ ತಾತ್ಕಲಿಕವಾಗಿ ಗೇಟ್ ಮತ್ತು ಕಾವಲುಗಾರರನ್ನು ನೇಮಿಸಿಸಲು ಸೂಕ್ತ ಕ್ರಮ ಕೈಗೊಂಡಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಸ್ಲಂ ಮಹಿಳಾ ಸಂಘಟನೆಯವರು ವಾರ್ಡ್ ವ್ಯಾಪ್ತಿಯಲ್ಲಿ ಪೋಲಿ ಹುಡಗರ ಹಾವಳಿ ಹೆಚ್ಚಗಿರುವುದರಿಂದ ಸಿ.ಸಿ ಕ್ಯಾಮರ ಅಳವಡಿಸುವಂತೆ ಸಭೆಯಲ್ಲಿ ಕೋರಿದರು.

ಮಾನ್ಯ ಅಧ್ಯಕ್ಷರು, ಸಂಚಾಲಕರರು ಹಾಗೂ ಸಹಾಯಕ ಅಭಿಯಂತರನ್ನು ಹಾಗೂ ಹಾಗೂ ಪೊಲೀಸ್ ಸಬೆಯಲ್ಲಿ ಹಾಜರಿದ್ದ ಪೊಲೀಸ್ ಸಿಬ್ಬಂದಿಯವರಿಗೆ ಸದರಿ ವಿಷಯದ ಬಗ್ಗೆ ವಿವರಣೆ ನೀಡುವಂತೆ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು 2021–22 ಸಾಲಿನಲ್ಲಿ ಹಣದ ಲಭ್ಯತೆ ಇಲ್ಲದ ಕಾರಣ ಮುಂದಿನ ಅಯ್ಯುವಯ್ಯ 2022–23ನೇ ಸಾಲಿನಲ್ಲಿ ತಾವು ತಿಳಿಸಿದ ಕಡೆಗಳಲ್ಲಿ ಸಿ.ಸಿ ಕ್ಯಾಮರ ಅಳವಡಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಪೊಲೀಸ್ ಸಿಬ್ಬಂದಿಯವರು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

---3

Scanned with CamScanner

ಅಧ್ಯಕ್ಷರುಬಿಡಬ್ಲೂಎಸ್‌ಎಸ್‌ಬಿ ಕಛೇರಿಗೆ ವಾರ್ಡ್ 136 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸುವಂತೆ ಸಭೆಯಲ್ಲಿ ತಿಳಿಸಿದರು

ಬಿಡಬ್ಲೂಎಸ್‌ಎಸ್‌ಬಿ ಅಧಿಕಾರಿಗಳು ವಾರ್ಡ್ 136 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು.

ಮಾನ್ಯ ಅಧ್ಯಕ್ಷರು ಕಂದಾಯ ಪರಿವೀಕ್ಷಕರನ್ನು ಮತದಾರರ ಗುರ್ತಿನ ಚೀಟಿಯ ಬಗ್ಗೆ ವಿವರಣೆ ಕೋರಿದರು,

ಆರೋಗ್ಯ ವೈದ್ಯಾಧಿಕಾರಿಗಳ ಪ್ರತಿನಿಧಿಯು ಕೋವಿಡ್-19 ಆಶಾ ಕಾರ್ಯಕರ್ತೆಯರು ಪ್ರತಿ ಮನೆಗೆ ಹೊಗಿ ಪ್ರತಿಯೊಬ್ಬರ ಆರೋಗ್ಯ ವಿಚಾರಿಸಿ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ತೆಗೆದು ಕೊಳ್ಳಲು ಅಧಿಕ ಜನರಿಗೆ ಮನಹೊಲಿಸಿ ಲಸಿಕೆ ನೀಡುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ಪ್ರತಿ ನಿತ್ಯ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ಮತ್ತು ವಾಹನಗಳ ಹಾಜರಾತಿಯ ವಿವರವನ್ನು ನೀಡುವಂತೆ ಸಭೆಯಲ್ಲಿ ತಿಳಿಸಿದರು.

.. ಕಿರಿಯ ಆರೋಗ್ಯ ಪರಿವೀಕ್ಷರು ವಾರ್ಡ್ -136ರ ವ್ಯಾಪ್ತಿಯಲ್ಲಿ ಬರುವ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ವಾಹನಗಳ ಹಾಜರಾತಿ ಸಭೆಯಲ್ಲಿ ನೀಡಿದರು,

ಮಾನ್ಯ ಸದಸ್ಯರು ವಾರ್ಡ್-136ರ ವ್ಯಾಪ್ತಿಯಲ್ಲಿ ಬರುವ ಹೆಚ್ ಬಿ. ಜಿ ರಸ್ತೆಯಲ್ಲಿ ಬೀದಿ ದೀಪಗಳು ಕೆಟ್ಟುಹೊಗಿದ್ದು ಸದರಿ ಬೀದಿ ದೀಪಗಳನ್ನು ಸರಿಪಡಿಸುವಂತೆ ಬೀದಿ ದೀಪಾಗಳ ನಿರ್ವಾಹಣೆ ಮಾಡುತ್ತೀರುವ ಗುತ್ತಿಗೆದಾರರಿಗೆ ಹಾಗೂ ಬಿ.ಬಿ.ಎಂ.ಪಿ ಬೀದಿ ದೀಪಾಗಳ ವಿಭಾಗಕ್ಕೆ ಪತ್ರವನ್ನು ಬರೆಯಲು ಸಭೆಯಲ್ಲಿ ಸೂಚಿಸಲಾಯಿತು

ಮಾನ್ಯ ಸದಸ್ಯರು ವಾರ್ಡ್-136ರ ವ್ಯಾಪ್ತಿಯಲ್ಲಿ ಹಲವು ರೀತಿಯಲ್ಲಿ ಬೇಸ್ಕಾಂಗೆ ಸಂಬಂಧಿಸಿದ ದೂರುಗಳು ಬಂದಿದ್ದು ರಾತ್ರಿಯ ಸಮಯದಲ್ಲಿ ಸ್ವಿಚ್‌ಗಳು ಹಾಗೂ ಲೈಟ್‌ಗಳು ಹಾಳಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

---4

Scanned with CamScanner

ಸಹಾಯಕ ಕಾರ್ಯ ಪಾಲಕ ಅಭಿಯಂಣತರರು(ಬೆಸ್ಕಾಂ) ರವರ ಪ್ರತಿನಿದಿಯು ಸದರಿ ವಿಷಯದ ಬಗ್ಗೆ ತುರ್ತು ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

ಆರೋಗ್ಯ ಪರಿವೀಕ್ಷಕರು ವಾಡ್-136 ಮತ್ತು ಕಂದಾಯ ಪರಿವೀಕ್ಷರು ವಾರ್ಡ್-136 ರವರುಗಳಿಗೆ ಕೋವಿಡ್-19 3ನೇ ಅಲೆಯು ಅಂತ್ಯ ಕಂಡು ಬಂದಿದ್ದು ಸೊಂಕಿನ ಬಗ್ಗೆ ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಆರೋಗ್ಯ ಪರಿವೀಕ್ಷಕರು ವಾರ್ಡ್ 136ರ ವ್ಯಾಪ್ತಿಯಲ್ಲಿ ಕೋವಿಡ್-19 ಸೊಂಕಿತರ ಸಂಖ್ಯೆ ಪೂರ್ಣ ಪ್ರಮಾಣದಲ್ಲಿ ಕಡಿಮೇಯಾಗಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು ಹಾಗೂ 3ನೇ ಅಲೆಯು ಕಡಿಮೆಯಾದ ಸಂಬಂಧ ಲಸಿಕೆ ಪಡೆಯದಿರುವರನ್ನು ಗುರ್ತಿಸಿ ಕೋವಿಡ್-19 ಲಸಿಕೆಯನ್ನು ಶೇ. 100 ರಷ್ಟು ಪ್ರಗತಿ ಸಾಧಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು: ಬಿಡಬ್ಲೂಎಸ್ಎಸ್‌ಬಿ ಕಛೆರಿಗೆ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರಿಂದ ಬಂದ ದೂರಿನ ಪುಸ್ತಕವನ್ನು ಪರಿಶೀಲಿಸಿದರು ಹಾಗೂ ಕೈಗೊಂಡ ಕ್ರಮಗಳ ವಿವರವನ್ನು ಕೋರಿದರು

ಬಿಡಬ್ಲೂಎಸ್ಎಸ್‌ಬಿ ಆಧಿಕಾರಿಗಳು ವಾರ್ಡ್ 136 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮಾಡುವುದಾಗಿ ತಿಳಿಸಿದರು.

ಅಧ್ಯಕ್ಷರು ಬೆಸ್ಕಂ ಕಛೆರಿಗೆ ವಾರ್ಡ್ 136 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸುವಂತೆ ಸಭೆಯಲ್ಲಿ ತಿಳಿಸಿದರು

ಬೆಸ್ಕಂ ಆಧಿಕಾರಿಯವರು ವಾರ್ಡ್ 136ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರುಗಳ ವಿವರ ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು.

---5

Scanned with CamScanner

ಕಮಿಟಿ ಸದಸ್ಯರು ವಾರ್ಡ್ 136ರ ವ್ಯಾಪ್ತಿಯಲ್ಲಿ ಬರುವ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಸ ಹಾಗೂ ಇತರೆ ತ್ಯಾಜ್ಯ ಹಾಕುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು

ಕಿರಿಯ ಆರೊಗ್ಯ ಪರೀವಿಷಕರನ್ನು ವಿಷಯದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಕಿರಿಯ ಆರೋಗ್ಯ ಪರಿವೀಕ್ಷಕರು ಸದರಿ ವಿಷಯವು ಬಂದಿದ್ದು ಸದರಿ ಸ್ಥಳಗಳಲ್ಲಿ ತ್ಯಾಜ್ಯ ಎಸೆಯುವವರ ಬಗ್ಗೆ ನಿಗವಹಿಸುವಂತೆ ಮಾರ್ಷಲ್‌ಗಳಿಗೆ ತಿಳಿಸಿ ಬಿ.ಬಿ.ಎಂ.ಪಿ ನಿಯಮಾನುಸಾರ ಕ್ರಮ ಕೈಗೊಳ್ಳು ಸಭೆಯಲ್ಲಿ ಹಾಜರಾಗಿದ್ದ ಮಾರ್ಷಲ್‌ಗಳಿಗೆ ಸೂಚಿಸಿದರು.

ಮಾನ್ಯ ಅಧ್ಯಕ್ಷರು ಕಂದಾಯ ಅಧಿಕಾರಿಗಳಿಗೆ ಮುಂದಿನ ಬಿ.ಬಿ.ಎಂ.ಪಿ ಚುನಾವಣೆಯ ಸಿದ್ದತೆ ಬಗ್ಗೆ ವಿವರವನ್ನು ಕೋರಿದರು.

ಕಂದಾಯ ಪರಿವೀಕ್ಷಕರು ವಾರ್ಡ್ ವಿಂಗಡನೆಯ ಬಗ್ಗೆ ಸಭೆಯನ್ನು ಕರೆಯಲಾಗಿದ್ದು ವಾರ್ಡ್‌ಗಳ ಜನಸಂಖ್ಯೆ ಮತ್ತು ಸ್ಲಂ ವಿವರವನ್ನು ಪಡೆದುಕೊಂಡಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು

ಮಾನ್ಯ ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ವಿವರ ಸಭೆಗೆ ನೀಡುವಂತೆ ಕೋರಿದರು ಹಾಗೂ ಅವಶ್ಯಕವಾಗಿ ನಡೆಯಬೇಕಾದ ಕಾಮಗಾರಿಗಳ ಬಗ್ಗೆ ವಿವರಣೆ ಕೋರಿದರು

ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್‌ನಲ್ಲಿ ನಡೆಯುತ್ತಿರುವ ಕಾಮಗಾರಿಗಳ ವಿವರವನ್ನು ನೀಡಿದರು ಹಾಗೂ 2021-22ನೇ ಸಾಲಿನ ಕಾರ್ಯಕ್ರಮ ಪಟ್ಟಿಗಳಿಗೆ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ಕೋರಿ ಕಡತವನ್ನು ಸಲ್ಲಿಸಿರುವುದಾಗಿ ಸಭೆಯಲ್ಲಿ ವಿವರಣೆ ನೀಡಿದರು.

ಮಾನ್ಯ ಅಧ್ಯಕ್ಷರು ವಾರ್ಡ್ 136ರ ವ್ಯಾಪ್ತಿಯಲ್ಲಿ ಮಾಷಲ್‌ಗಳು ವಿಧಿಸಿದ ದಂಡದ ವಿವರವನ್ನು ಕೋರಿದರು.

ವಾರ್ಡ್-136ರ ಮಾಷಲ್ ಗಳು ಒಟ್ಟು ವಿಧಿಸಿದ ದಂಡ ರೂ. 10500 ಎಸ್ ಡಬ್ಲ್ಯೂಎಂ. ದಂಡ ರೂ. 7000 ಎಂದು ಸಭೆಯಲ್ಲಿ ತಿಳಿಸಿದರು ಸದರಿ ಹಣವನ್ನು ಮುಖ್ಯ ಕಛೇರಿಗೆ ಸಲ್ಲಿಸಿರುತ್ತಾರೆ.

---6

Scanned with CamScanner

ಇಂದಿನ ಸಭೆಯಲ್ಲಿ ಚರ್ಚಿಸಿದ ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು. ಸಭೆಯ ನಡಾವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

| ಕ್ರಮ ಸಂಖ್ಯೆ | ವಾರ್ಡ್ ಹಂತದ ಸಮಿತಿ ಹಾಗೂ ಸದಸ್ಯರುಗಳ ಹೆಸರು ಮೊಬೈಲ್ ಸಂಖ್ಯೆ | | ಸಹಿ |
|---|---|---|---|
| 1 | ಡಾ॥ ಅಲ್ಲಮಪ್ರಭು, ದೂ. 9480685654<br>ಸಹಾಯಕ ನಿರ್ದೇಶಕರು (ಪಶುಪಾಲನೆ ಪಶ್ಚಿಮ) ಬಿ.ಬಿ.ಎಂ.ಪಿ. | ವಾರ್ಡ್‌ನ ನೋಡಲ್ ಅಧಿಕಾರಿ | [signature] 21/2/2022 |
| 2 | ಶ್ರೀ ಸತೀಶ್ ಕುಮಾರ್<br>ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ: 136<br>ಬಿ.ಬಿ.ಎಂ.ಪಿ ದೂ. 9986740382 | ಸದಸ್ಯ ಕಾರ್ಯದರ್ಶಿ | [signature] |
| 3 | ಎನ್. ಲಕ್ಷ್ಮಿ ನರಸಿಂಹಯ್ಯ ದೂ. 9845563157<br>ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ –136 | ಸದಸ್ಯರು | [signature] |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರ(ಕಾಮಗಾರಿ) ಜೆ.ಜೆ.ಆರ್ ನಗರ ಉಪ ವಿಭಾಗದ ಪ್ರತಿನಿಧಿ<br>ಶ್ರೀ ಬಾಬು (ಕೆಲಸ ಪರಿವೀಕ್ಷಕರು) 9342582372 | ಸದಸ್ಯರು | [signature] |
| 5 | ಆರೋಗ್ಯಾಧಿಕಾರಿಗಳು, ಚಾಮರಜಪೇಟೆ ವಿಭಾಗ ರವರ ಪ್ರತಿನಿಧಿ.<br>ಹಿರಿಯ ಆರೋಗ್ಯಧಿಕಾರಿಗಳು ಜಿ.ಎಂ. ಮುತ್ಯಾಲು<br>ದೂ. 9916444041 | ಸದಸ್ಯರು | — |
| 6 | ಶ್ರೀ ಉಮೇಶ್<br>ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ<br>ದೂ. 873557760 | ಸದಸ್ಯರು | [signature] |
| 7 | ಶ್ರೀ ಮೊಹಮದ್ ಮುಜಾಮಿಲ್<br>ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ<br>ದೂ. 7349649906 | ಸದಸ್ಯರು | [signature] |
| 8 | ಶ್ರೀಮತಿ ಚಂದ್ರಕಲಾ ದೂ. 8904845720<br>ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 136 | ಸದಸ್ಯರು | [signature] |
| 9 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರ ಪ್ರತಿನಿಧಿಎನ್. ಲಕ್ಷ್ಮಿ ನರಸಿಂಹಯ್ಯ<br>ದೂ. 9845563157 | ಸದಸ್ಯರು | [signature] |
| 10 | ಸಹಾಯಕ ಕಾರ್ಯಪಾಲಕ ಅಭಿಯಂತರರ<br>( ಬಿಡಬ್ಲ್ಯೂ.ಎಸ್.ಎಸ್.ಬಿ) ರವರ ಪ್ರತಿನಿಧಿ<br>ಕುಮಾರ ಸ್ವಾಮಿ, ದೂ. 9060341644 | ಸದಸ್ಯರು | [signature] |
| 11 | ಸಹಾಯಕ ಕಾರ್ಯ ಪಾಲಕ ಅಭಿಯಂಣತರರು(ಬೆಸ್ಕಂ) ರವರ ಪ್ರತಿನಿಧಿ | ಸದಸ್ಯರು | [signature] |
| 12 | ಮಾಗಡಿ ರಸ್ತೆ ಸಂಚಾರ ಪೋಲೀಸ್ ಠಾಣೆ ಯ ಪ್ರತಿನಿಧಿ<br>ಶ್ರೀ ರಾಮಚಂದ್ರ ಎ. ಎ.ಎಸ್.ಐ ದೂ.9902992624 | ಸದಸ್ಯರು | [signature] |
| 13 | ಜೆ.ಜೆ.ಆರ್ ನಗರ ಪೋಲೀಸ್ ಠಾಣೆ ಯ ಪ್ರತಿನಿಧಿ | ಸದಸ್ಯರು | [signature] |
| 14 | ವಾರ್ಡ್ 136 ಮಾರ್ಷಲ್, ಮುಬೀನ್ | ಸದಸ್ಯರು | — |

[signature]
ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 136
ವಾರ್ಡ್ ಹಂತದ ಸಮಿತಿ

[signature] 21/2/2022
ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಹಂತದ ಸಮಿತಿ, ವಾರ್ಡ್ ನಂ. 136

Scanned with CamScanner